ಸತ್ರ ಪ್ರಕರಣ ಸಂಖ್ಯೆ:

| | |
|---|---|
| ಫ್ರಾಸಾ | 08 |
| ಚಾಸಾ | 07 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ.4
(ಸಿವಿಲ್)

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**(ಕಾರ್ಯಸ್ಥಾನ ಚಿಂತಾಮಣಿ)**

**ಎಸ್.ಸಿ ಪ್ರಕರಣ ಸಂಖ್ಯೆ:27/2025**

**ದಿನಾಂಕ: 05.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ವೆಂಕಟೇಶ್ |
| ತಂದೆಯ ಹೆಸರು | : | ಲೇಟ್.ಸುಬ್ಬರಾಯಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಪೇಂಟ್ ಕೆಲಸ |
| ವಾಸಸ್ಥಳ | : | ಶ್ರೀನಿವಾಸಪುರ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1.ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿರುವುದಿಲ್ಲ. ನ್ಯಾಯಾಲಯದ ಮುಂದಿರುವ ವಸ್ತುಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ನನಗೆ ಈ ಕೇಸಿನ ಬಗ್ಗೆ ಏನು ಗೊತ್ತಿರುವುದಿಲ್ಲ. ಆದರೆ ಸಾಕ್ಷಿಯು ನಿಪಿ-2 ರಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. 3 ಸಹಿಗಳನ್ನು ಒಟ್ಟಾಗಿ ನಿಪಿ-2(ಹೆಚ್)

| | |
|---|---|
| ಪ್ರಾಸಾ | 08 |
| ಚಾಸಾ | 07 |

ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು 2018 ರಲ್ಲಿ ಮೈಲಾಂಡ್ ಹಳ್ಳಿ ಗೇಟ್ ನ ಬಳಿ ಮಾಡಿರುತ್ತೇನೆ. ನಾನು ಸದರಿ ಮೈಲಾಂಡ್ ಹಳ್ಳಿ ಗೇಟ್ ನ ಬಳಿ ಟಿಫನ್ ಮಾಡುತ್ತಿದ್ದ ಸಮಯದಲ್ಲಿ ಪೋಲಿಸರು ಕರೆದು ದಾಖಲೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಯಲ್ಲಿ ಏನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-</u>**

**2)** ನನಗೆ ಚಾಸಾ-8 ಎಸ್.ವಿ ಮಂಜುನಾಥ ಮತ್ತು ಚಾಸಾ-9 ಹೆಚ್ ಎಂ ಮಂಜುನಾಥ ರವರ ಪರಿಚಯ ಇರುವುದಿಲ್ಲ. ದಿ.20-12-2018 ರಂದು ಮದ್ಯಾಹ್ನ 12-00 ಗಂಟೆಯ ಸಮಯದಲ್ಲಿ ನಾನು ಚಾಸಾ-8 ಮತ್ತು ಚಾಸಾ-9 ರವರು ಮೈಲಾಂಡ್ಲ ಹಳ್ಳಿ ಗೇಟ್ ನಲ್ಲಿರುವ ಟೀ ಅಂಗಡಿಯ ಮುಂದ ನಿಂತು ಟೀ ಕುಡಿಯುತ್ತಿದ್ದೇವು ಎಂದರೆ ಸರಿಯಲ್ಲ. ಟೀ ಕುಡಿಯುತ್ತಿದ್ದಾಗ ಕೆಎ 40-ಜಿ326 ಹಾಗೂ ಕೆಎ 40-ಜಿ600 ಸಂಖ್ಯೆಯ ಸರ್ಕಾರಿ ಜೀಪ್ ಗಳಲ್ಲಿ ಪೋಲಿಸರು ,

ಸತ್ರ ಪ್ರಕರಣ ಸಂಖ್ಯೆ:

| | |
|---|---|
| ಪ್ರಾಸಾ | 08 |
| ಚಾಸಾ | 07 |

ತಾಲೂಕು ಆರೋಗ್ಯ ಅಧಿಕಾರಿಗಳಾದ ರಾಮಚಂದ್ರ ರೆಡ್ಡಿ , ಡಾ.ಸುಜಾತ, ಡಾ.ಸುಮಾ ಬಂದು , ನಮ್ಮನ್ನು ಕರೆದಿದ್ದರು ಎಂದರೆ ಸರಿಯಲ್ಲ. ಮೈಲಾಂಡ್ಲ ಹಳ್ಳಿ ಗೇಟ್ ನಲ್ಲಿ ರಮಣಚಾರಿರವರು ಅನಧಿಕೃತವಾಗಿ ಕ್ಲಿನಿಕ್ ನಡೆಸುತ್ತಿರುವುದಾಗಿ ನನಗೆ ಖಚಿತ ಮಾಹಿತಿ ಗೊತ್ತಿತ್ತು, ಆ ಮೇರೆಗೆ ಕ್ಲಿನಿಕ್ ಮತ್ತು ವ್ಯಕ್ತಿಯ ಮೇಲೆ ದಾಳಿ ಮಾಡಬೇಕು, ಪಂಚರಾಗಿ ಸಹಕರಿಸುವಂತೆ ಕೋರಿದ ಮೇರೆಗೆ ನಾವು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ಆ ಮೇರೆಗೆ ಮೈಲಾಂಡ್ಲ ಹಳ್ಳಿ ಗ್ರಾಮದ ತಿಪ್ಪರಾಜು ರವರ ಬಾಬ್ತು ಕಟ್ಟಡದಲ್ಲಿರುವ ಅಂಗಡಿಯ ಬಳಿ ಬಂದು ವಾಹನವನ್ನು ನಿಲ್ಲಿಸಿದರು ಎಂದರೆ ಸರಿಯಲ್ಲ. ಸದರಿ ಕಟ್ಟಡದಲ್ಲಿ ಕ್ಲಿನಿಕ್ ನಡೆಸುತ್ತಿದ್ದ ವ್ಯಕ್ತಿಯನ್ನು ತಾಲೂಾಕು ಆರೋಗ್ಯ ಅಧಿಕಾರಿಗಳು ಜೊತೆಯಲ್ಲಿದ್ದ ಇತರ ಅಧಿಕಾರಿಗಳು ದಾಳಿ ಮಾಡುವ ಪೂರ್ವದಲ್ಲಿ ಆತನ ಹೆಸರು ಮತ್ತು ವಿಳಾಸ ಕೇಳಿದ್ದರು ಎಂದರೆ ಸರಿಯಲ್ಲ. ಆತನ ಹೆಸರು ರಮಣಚಾರಿ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ ಮತ್ತು ಕ್ಲಿನಿಕ್ ನಡೆಸಲು ಪರವಾನೆಗೆ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಕಟ್ಟಡದ ಬಾಗಿಲು ಉತ್ತರಕ್ಕೆ ಇತ್ತು . ರೋಲಿಂಗ್ ಶೆಟರ್ ಅಳವಡಿಸಿದ್ದು , ಒಳಗೆ ಹೋಗಿ ನೋಡಲಾಗಿ 12X20 ಅಡಿ ವಿಸ್ತೀರ್ಣ ಇದ್ದು , ಟೇಬಲ್ , ಚೇರ್ ಹಾಗೂ ರೋಗಿಗಳು ಕುಳಿತುಕೊಳ್ಳಲು ಚೇರುಗಳು, ಸದರಿ ದಕ್ಷಿಣ ದಿಕ್ಕಿನಲ್ಲಿ ಗೋಡೆ

| | |
|---|---|
| ಫ್ರಾಸಾ | 08 |
| ಚಾಸಾ | 07 |

ಇದ್ದು, ಗೋಡೆಯ ದಕ್ಷಿಣ ದಿಕ್ಕಿನಲ್ಲಿ ತೆರೆದ ಬಾಗಿಲಿರುವ ಮತ್ತೊಂದು ಸಣ್ಣ ಕೊಠಡಿ ಇದ್ದು, ಒಳಗೆ ಪ್ರವೇಶ ಮಾಡಲಾಗಿ ಇನ್ನೊಂದು ಕೊಠಡಿ 20X08 ಅಡಿ ಸಿಮೆಂಟ್ ನೆಲ ಇರುತ್ತದೆ ಎಂದರೆ ಸರಿಯಲ್ಲ. ಮೇಲ್ಛಾವಣಿ ಕಲ್ಲು ಚಪ್ಪಡಿಯಿಂದ ಕೂಡಿತ್ತು ಎಂದರೆ ಸರಿಯಲ್ಲ. ಪೂರ್ವ ಪಶ್ಚಿಮಕ್ಕೆ ಒಂದು ದಿವಾನ ಹಾಕಿದ್ದು, ಅದರ ಮೇಲೆ ಮಲಗುವ ಸಲುವಾಗಿ ಹಾಸಿಗೆಯನ್ನು ಹಾಕಿದ್ದರು ಎಂದರೆ ಸರಿಯಲ್ಲ. ಹಾಸಿಗೆಯ ಉತ್ತರ ದಿಕ್ಕಿಗೆ ಗೋಡೆಗೆ ತಾಕಿ ಕೊಂಡು ಒಂದು ಕಬ್ಬಿಣದ ಅಲಮಾರ ಇದ್ದು ಅದರಲ್ಲಿ ವಿವಿಧ ರೀತಿಯ ಈ ದಿನ ನ್ಯಾಯಾಲಯದ ಮುಂದಿರುವ 43 ಔಷಧಗಳು ಇದ್ದವು ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಆರೋಗ್ಯ ಅಧಿಕಾರಿಗಳು ಮಹಜರ್ ಮುಖಾಂತರ ಅಮಾನತ್ತು ಪಡಿಸಿಕೊಂಡು , ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಪಿಯುಸಿ ವ್ಯಾಸಂಗ ಮಾಡಿದ್ದು, ತಾನು ವೈದ್ಯನೆಂದು ಜನರಿಗೆ ಮೋಸ ಮಾಡಿ ಯಾವುದೇ ಪರವಾನೆಗೆ ಇಲ್ಲದೆ ರೋಗಿಗಳಿಗೆ ಚಿಕಿತ್ಸೆ ನೀಡಿ ಅವರ ಜೀವನದ ಜೊತೆ ಚೆಲ್ಲಾಟ ಮಾಡುತ್ತಾ ಚಿಕಿತ್ಸೆ ನೀಡುತ್ತಿರುವುದಾಗಿ ಕಂಡು ಬಂದಿತ್ತು ಎಂದರೆ ಸರಿಯಲ್ಲ. ಆ ಕಾರಣದಿಂದ ತಾಲೂಕು ಆರೋಗ್ಯ ಅಧಿಕಾರಿಗಳು ಆತನನ್ನು ವಶಕ್ಕೆ ಪಡೆದು ಠಾಣೆಯಲ್ಲಿ ಹಾಜರು ಪಡಿಸಿ ದೂರು ನೀಡಿದ್ದ ಮೇರೆಗೆ ಆತ ನಕಲಿ ವೈದ್ಯ ಎಂದು ತಿಳಿದು ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ.

| | |
|---|---|
| ಪ್ರಾಸಾ | 08 |
| ಚಾಸಾ | 07 |

ಆರೋಪಿಯನ್ನು ಮತ್ತು ಅಮಾನತ್ತು ಪಡಿಸಿಕೊಂಡಿರುವ ವಸ್ತುಗಳನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ದಿ.20-12-2018 ರಂದು "ದಿ.20-12-2018------------------------ ನೋಡಿದರೆ ಗುರುತಿಸುತ್ತೇನೆ ಎಂದು" ಈಗ ಓದಿ ಹೇಳಿದಂತೆ ನಿಪಿ-05 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ನಾನು ನಿಪಿ-05 ರಂತೆ ಹೇಳಿಕೆ ನೀಡಿದ್ದರೂ ಹಾಗೂ ನಿಪಿ-2 ಕ್ಕೆ ಸಹಿ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಆರ್.ಬಿ. ವಕೀಲರಿಂದಃ**

ಇರುವುದಿಲ್ಲ.

**ಮರುವಿಚಾರಣೆಃ ಇಲ್ಲ.**

**(ದಿನಾಂಕಃ05.06.2026ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**2 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ (ಕಾರ್ಯಸ್ಥಾನ ಚಿಂತಾಮಣಿ)**